ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ವಿಧಾನ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ    ದಿನಾಂಕ : DATE : 11/07/2019

# ಸ್ಪೀಕರ್‌ಗೆ ಜನರ ದೂರು ಆಲಿಸುವ ಅಧಿಕಾರವಿದೆಯೇ?

ಉ.ವಾ. 11/7/19

ಬೆಂಗಳೂರು: ಶಾಸಕರ ರಾಜೀನಾಮೆಯಿಂದ ಮರು ಚುನಾವಣೆಯಾದರೆ ಸಾರ್ವಜನಿಕರ ತೆರಿಗೆ ಹಣ ಪೋಲು ತಡೆಯುವ ಕಾರ್ಯ ವ್ಯಾಪ್ತಿ ವಿಧಾನಸಭಾಧ್ಯಕ್ಷರಿಗೆ ಇದೆಯೇ ಎಂಬುದನ್ನು ಖಚಿತಪಡಿಸುವಂತೆ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಂ.ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಶಾಸಕರ ರಾಜೀನಾಮೆ ಬಗ್ಗೆ ಇಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಸ್ಪೀಕರ್ ರಮೇಶ್ ಕುಮಾರ್, ಮರು ಚುನಾವಣೆ ತಪ್ಪಿಸುವಂತೆ ಸಾರ್ವಜನಿಕರ ದೂರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ದೂರು ಆಲಿಸಿ ಪರಿಶೀಲಿಸುವುದು ಕಾರ್ಯ ವ್ಯಾಪ್ತಿ ಸ್ಪೀಕರ್‌ಗೆ ಬರುವುದೇ ಎಂದು ಖಚಿತಪಡಿಸಬೇಕು ಎಂದರು.

## ಹಣಕಾಸು ವಿಧೇಯಕ ಬಿದ್ದರೆ ಸರ್ಕಾರ ಪತನ



ಬೆಂಗಳೂರು: ಉಸಿರು ನಿಂತರೆ ಹೇಗೆ ಜೀವ ಹೋಗುತ್ತದೆಯೋ ಹಾಗೆ ಹಣಕಾಸು ಬಿಲ್ ಪಾಸ್ ಆಗದಿದ್ದರೆ ಸರ್ಕಾರ ಪತನವಾಗುತ್ತದೆ ಎಂದು ವಿಧಾನಸಭಾಧ್ಯಕ್ಷ ರಮೇಶ್‌ಕುಮಾರ್ ಹೇಳಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಅಧಿವೇಶನದಲ್ಲಿ ಹಣಕಾಸು ವಿಧೇಯಕ ಅಂಗೀಕಾರವಾಗಬೇಕು ಇಲ್ಲದಿದ್ದರೆ, ಸರ್ಕಾರದ ಚಟುವಟಿಕೆಗಳು ನಿಂತು ಹೋಗುತ್ತವೆ ಎಂದು ಹೇಳಿದರು.



ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ಬುಧವಾರ ರಾತ್ರಿ ಬೆಂಗಳೂರಿಗೆ ಆಗಮಿಸಿದರು.

3